**CW : 10**

PW : 9

**1**ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.864/2025

ಸಾಕ್ಷಿದಾರರ ಹೆಸರು : ರೋಹಿತ್ ಪಿ.ಜಿ

ತಂದೆಯ ಹೆಸರು : ಗಂಗಾಧರ ಗೌಡ

ಪ್ರಾಯ : 32 ವರ್ಷ

ಉದ್ಯೋಗ ಅಂಗಡಿಯಲ್ಲಿ

ವಾಸಸ್ಥಳ : ಕೊಳ್ತಿಗೆ ಗ್ರಾಮ

ದಿನಾಂಕ:**09-06-2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ಚಾ.ಸಾ.1 ನನ್ನ ತಮ್ಮ. ಚಾ.ಸಾ.2 ಮತ್ತು 3 ನನ್ನ ತಂದೆ-ತಾಯಿ. ನನ್ನ ಮಾಲೀಕತ್ವದ ಕೆಎ-21-ವೈ-6146 ನೋಂದಣಿ ಸಂಖ್ಯೆಯ ಹೊಂಡಾ ಆಕ್ಟಿವಾ ಇರುತ್ತದೆ. ಸಾಕ್ಷಿಗೆ ಕಲಂ 133 ಐಎಂವಿ ಕಾಯ್ದೆ ಪ್ರಕಾರ ನೀಡಲಾದ ಪೊಲೀಸ್ ನೋಟೀಸನ್ನು ತೋರಿಸಿದ್ದು ಅದರಲ್ಲಿ ತನ್ನ ಸಹಿ ಇರುವುದನ್ನು ಗುರುತಿಸಿದ ಕಾರಣ ಸದರಿ ನೋಟೀಸನ್ನು ನಿ.ಪಿ.9 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ.9(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ದಿನಾಂಕ 20-03-2023 ರ ಇನ್ನೊಂದು ದಾಖಲೆ ತೋರಿಸಲಾಗಿ ಅದರಲ್ಲಿನ ತಮ್ಮ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿ.ಪಿ.10 ಎಂದು ಅದರಲ್ಲಿನ ಸಾಕ್ಷಿ ಸಹಿಯನ್ನು ನಿ.ಪಿ.10(ಎ) ಎಂದು ಗುರುತಿಸಲಾಯಿತು.

ಅಪಘಾತ ಕಾಲದಲ್ಲಿ ನನಗೆ ಸೇರಿದ ಮೇಲೆ ತಿಳಿಸಿದ ಕೆಎ-21-ವೈ-6146 ನೋಂದಣಿ ಸಂಖ್ಯೆಯ ಹೊಂಡಾ ಆಕ್ಟಿವಾ ವಾಹನವನ್ನು ನನ್ನ ತಂದೆ ಗಂಗಾಧರ ಗೌಡ ರವರು ಓಡಿಸುತ್ತಿದ್ದರು. ನಾನು ಪೊಲೀಸರಿಗೆ ನಷ್ಟ ಭರ್ತಿ ಬಾಂಡ್ ಬರೆದುಕೊಟ್ಟು ನನ್ನ ವಾಹನವನ್ನು ವಶಕ್ಕೆ ಪಡೆದಿದ್ದೇನು. ಸಾಕ್ಷಿಯ ನಷ್ಟ ಭರ್ತಿ ಬಾಂಡ್ ನ್ನು ಹಾಗೂ ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ನಷ್ಟ ಭರ್ತಿ ಬಾಂಡ್ ನ್ನು ನಿ.ಪಿ.11 ಎಂದು ಹಾಗೂ ಅದರಲ್ಲಿರ ಸಾಕ್ಷಿಯ ಸಹಿಯನ್ನು ನಿ.ಪಿ.11(ಎ) ಎಂದು ಗುರುತಿಸಲಾಯಿತು.

ನನ್ನ ವಾಹನದ ಬಾವ ಚಿತ್ರವನ್ನು ನೋಡಿ ಗುರುತಿಸಬಲ್ಲೆ. ಸಾಕ್ಷಿ ನಿ.ಪಿ.4 ರಲ್ಲಿ ಕಾಣುವ ವಾಹನ ಬಾವ ಚಿತ್ರ ವನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃಆರೋಪಿತರ ಪರ ಶ್ರೀ ಬಿ.ಎನ್.ಪಿ. ವಕೀಲರಿಂದಃ</u>

ಏನೂ ಇರುವುದಿಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.